ಹಮ್ಮಿಕೊಂಡಿರುವ ಕಾರ್ಯಕ್ರಮಗಳು

1. ಜೈನ್‌ಲಿಂಕ್ ಬೇಲಿ ನಿರ್ಮಾಣ ಹಡ್ಸನ್ ಸರ್ಕಲ್‌ನಿಂದ ಲೈಬ್ರರಿವರೆಗೆ ಮತ್ತು ಸಿದ್ದಲಿಂಗಯ್ಯ ಸರ್ಕಲ್ ನಿಂದ ಮಹಾರಾಜ ಪ್ರತಿಮೆವರೆಗೆ.

2. ಉದ್ಯಾನವನಕ್ಕೆ ಬೇಕಾಗುವ ಸಾಮಗ್ರಿಗಳು.

3. ಉದ್ಯಾನವನದಲ್ಲಿ ವಿದ್ಯುತ್ ದೀಪದ ನಿರ್ವಹಣೆ.

4. ಗುಲಾಬಿ ವನದ ಪುನಶ್ಚೇತನ ಕಾರ್ಯ.

5. ಮಹಾರಾಜ ಪ್ರತಿಮೆ ವಿಭಾಗದಲ್ಲಿನ ಆಧುನಿಕ ಅಭಿವೃದ್ಧಿ ಹಾಗೂ ನೀರಿನ ಸೌಕರ್ಯ ಕಲ್ಪಿಸುವುದು.

6. ಎಲ್.ಆರ್.ಡಿ.ಇ. ಪ್ರದೇಶ (ಸಂಗೀತ ನೃತ್ಯ ಕಾರಂಜಿ) ಉದ್ಯಾನವನದ ಅಭಿವೃದ್ಧಿ ಯೋಜನೆ.

7. ಬ್ಯಾಂಡ್ ಸ್ಟಾಂಡ್ ಸುತ್ತಲಿನ ಪ್ರದೇಶದಲ್ಲಿ ಕಾಲು ದಾರಿಗಳನ್ನು ಉತ್ತಮಪಡಿಸುವಿಕೆ.

ಲಾಲ್‌ಬಾಗ್ ಸಸ್ಯತೋಟದಲ್ಲಿನ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು.

1. ಗಾಜಿನ ಮನೆಯಲ್ಲಿ ವಿದ್ಯುತ್ ದೀಪ ಬಲಪಡಿಸುವುದು.

2. ಲಾಲ್‌ಬಾಗ್ ಕೆರೆಯನ್ನು ಸ್ವಚ್ಚಗೊಳಿಸುವುದು.

3. ಪೈಕಾಸ್ ಲಾನ್‌ಗೆ ತುಂತುರು ನೀರಾವರಿ ವ್ಯವಸ್ಥೆ.

4. ಟೊಪಿಯಾರಿ ಮತ್ತು ಪ್ಲೂಮೇರಿಯಾ ತೋಟಗಳಿಗೆ ಹನಿ ನೀರಾವರಿ ಒದಗಿಸುವುದು.

5. ತೋಟಗಳ ಸಾಮಾಗ್ರಿಗಳನ್ನು ಹಾಗೂ ಅವಶ್ಯಕತೆ ಇತರೆ ವಸ್ತುಗಳನ್ನು ಖರೀದಿಸುವುದು (ಅಪರೂಪದ ತಳಿಗಳು ಸೇರಿಸುತ್ತವೆ.)

6. ಸಾರ್ವಜನಿಕರಿಗೆ ಆಸನದ ವ್ಯವಸ್ಥೆ, ಸ್ವಚ್ಚತೆಗೆ ಡೆಸ್ಟ್‌ಬಿನ್ ಅಳವಡಣೆ ಇತ್ಯಾದಿ.

7. ಅಭಿವೃದ್ಧಿಯಾಗದ ಪ್ರದೇಶಗಳಲ್ಲಿ ಅಪರೂಪ ಗಿಡಗಳನ್ನು ಹಾಕುವುದು ಮತ್ತು ರಸ್ತೆ ಬದಿಗಳಲ್ಲಿ ಹೂವಿನ : ಅಲಂಕಾರಿಕ.ಗಿಡಗಳಿಂದ ಶೃಂಗರಿಸುವುದು.

8. ಕೆಲವು ಭಾಗಗಳಿಗೆ ಅಲಿಕಾರಿಕ ಬೇಲಿಗಳ ನಿರ್ಮಾಣ ಕಾಲುದಾರಿಗಳ ಇಕ್ಕೆಲಗಳಲ್ಲಿ ಬಣ್ಣ ಬೆಳೆಸುವ ಕಾರ್ಯ ಇತ್ಯಾದಿ.

9. ಗುಲಾಬಿ ತೋಟದ ಪುನಶ್ಚೇತನ, ಪ್ರತಿಮೆ ಗಾರ್ಡನ್ ವಿಭಾಗದಲ್ಲಿನ ಲಾನ್ ಪುನಶ್ಚೇತನ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳು.

10. ಕೆಂಪೇಗೌಡ ಗೋಪುರದ ಹತ್ತಿರ ಕಾಲುದಾರಿ ನಿರ್ಮಾಣ ಮತ್ತು ಹಾಲಿ ಇರುವ ಶೌಚಾಲಯದ ನವೀಕರಣ ಇತ್ಯಾದಿ.

11. ಹೊಸದಾಗಿ 2 ಬೋರವೆಲ್‌ಗಳನ್ನು ಕೊರೆಸುವುದು ಮತ್ತು ತಾವರೆ ಕೊಳವನ್ನು ಸ್ವಚ್ಚತೆಗೊಳಿಸುವುದು.

ವಿಷಯ:- ಕಬ್ಬನ್‌ಪಾಕ್ ಮತ್ತು ಲಾಲ್‌ಬಾಗ್‌ಗೆ ಬರುವ ಪ್ರವಾಸಿಗರಿಗೆ ರಕ್ಷಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 18 (90)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಉದ್ಯಾನವನಗಳಲ್ಲಿ ಬರತಕ್ಕ ಪ್ರವಾಸಿಗರಿಗೆ ಯಾವುದೇ ರಕ್ಷಣೆ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ : ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಹಾಗಿದ್ದಲ್ಲಿ, ಪ್ರವಾಸಿಗರ ರಕ್ಷಣೆಗೆ ವ್ಯವಸ್ಥೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ? : ಈ ಉದ್ಯಾನವನಗಳಲ್ಲಿ ಪ್ರವಾಸಿಗರ ರಕ್ಷಣೆಗೆ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅ) ತೋಟಗಾರರನ್ನು ವಿವಿಧ ಭಾಗಗಳಲ್ಲಿ ನೇಮಿಸಿ ಇಲಾಖೆ ಆಸ್ತಿ ರಕ್ಷಣೆ ಹಾಗೂ ಪ್ರವಾಸಿಗರ ರಕ್ಷಣೆಯ ಕಾರ್ಯ ಕೈಗೊಳ್ಳಲಾಗುತ್ತಿದೆ.

ಆ) ಕಬ್ಬನ್ ಉದ್ಯಾನವನದಲ್ಲಿ ಒಂದು ಪೋಲಿಸ್ ಠಾಣೆ ಈಗಾಗಲೇ ಅಸ್ಥಿತ್ವದಲ್ಲಿದ್ದು, ಲಾಲ್‌ಬಾಗ್ ಸಸ್ಯ ತೋಟದ ಮುಖ್ಯ ದ್ವಾರದಲ್ಲಿ ಪೋಲಿಸ್ ಔಟ್‌ಪೋಸ್ಟ್ ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಬ್ಬನ್ ಪಾರ್ಕ್‌ನಲ್ಲಿ ಪ್ರವಾಸಿಗರಿಗೆ ಮತ್ತು ಸಾರ್ವಜನಿಕರಿಗೆ ರಕ್ಷಣೆಯನ್ನು ನೀಡಲು ಪೋಲಿಸ್ ಇಲಾಖೆಯು 4 ಮಂದಿ ಕಾನ್ಸ್‌ಟೇಬಲ್‌ರನ್ನುಮತ್ತು ಒಬ್ಬ ಸಹಾಯಕ ಆರಕ್ಷಕ ನಿರೀಕ್ಷಕರನ್ನು ನೇಮಿಸಿ, ದಿನವಿಡಿ ಮತ್ತು ರಾತ್ರಿ ಗಸ್ತು ತಿರುಗಲು ಏರ್ಪಡಿಸಿದೆ ಇದಲ್ಲದೆ ಸಾಯಂಕಾಲ 5.00 ರಿಂದ 10.00 ಗಂಟೆಯವರೆಗೆ ಒಬ್ಬ ಹೆಚ್ಚುವರಿ ಹೆಡ್ ಕಾನ್ಸ್‌ಟೇಬಲ್ ಮತ್ತು 4 ಮಂದಿ ಕಾನ್ಸ್‌ಟೇಬಲ್‌ರನ್ನು ಆಗಾಗ್ಗೆ ಗಸ್ತು ತಿರುಗಲು ಏರ್ಪಾಡು ಮಾಡಲಾಗಿದೆ.

ಶ್ರೀ ಡಿ. ಟಿ. ಜಯಕುಮಾರ್

(ತೋಟಗಾರಿಕೆ ರಾಜ್ಯ ಸಚಿವರು)

ವಿಷಯ:- ಗ್ರಾಮಠಾಣ ನಿವೇಶಗಳನ್ನು ನೋಂದಾವಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 19 (91)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ನಗರದ ಸುತ್ತಮುತ್ತಲಿನ ನೋಟಿಫೈಡ್ ಏರಿಯಾಗಳಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ನೋಂದಾವಣೆಯನ್ನು ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ : ಅಧಿಕೃತ ಗ್ರಾಮಠಾಣ ನಿವೇಶನಗ ಳನ್ನು ನೋಂದಣಿ ಮಾಡಿಸುವುದನ್ನು ನಿಲ್ಲಿಸಿರುವುದಿಲ್ಲ. ಆದರೆ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಾಲಂ - 95 ರ ಅನ್ವಯ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆಗೊಳಿಸದೇ, ನಿವೇಶನಗಳನ್ನಾಗಿ ಪರಿವರ್ತಿಸಿ ಇಂತಹಾ ನಿವೇಶನಗಳು ಗ್ರಾಮಠಾಣ ವ್ಯಾಪ್ತಿಯಲ್ಲಿ ಇವೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ದಸ್ತಾವೇಜುಗಳನ್ನು ನೋಂದಾಯಿಸಿಕೊಳ್ಳುವುದನ್ನು ದಿನಾಂಕ: 23. 3. 96 ರಿಂದ ನಿಷೇಧಿಸಲಾಗಿದೆ.

ಆ) ಹಾಗಿದ್ದಲ್ಲಿ ಯಾವಾಗಿನಿಂದ ನಿಲ್ಲಿಸಲಾಗಿದೆ ಹಾಗೂ ಇದಕ್ಕೆ ಕಾರಣಗಳೇನು: ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.